# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 26-5-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಇಂಡೋನೇಶಿಯಾ ಪಾಮೆಣ್ಣೆ ರಫ್ತು ನಿರ್ಬಂಧ ಹಿಂತೆಗೆತ

ಇಂಡೋನೇಶಿಯಾ 19/5/2022 ರಂದು ಪಾಮೆಣ್ಣೆ ರಫ್ತು ನಿರ್ಬಂಧ ಹಿಂತೆಗೆಯಲು ನಿರ್ಧರಿಸಿದೆಯೆಂದೂ ಮುಂದಿನ ಸೋಮವಾರ 23/5/2022 ರಿಂದ ಪಾಮೆಣ್ಣೆ ರಫ್ತು ಪುನರಾರಂಭವಾಗಲಿದೆಯಿಂದೂ ಪ್ರಕಟಿಸಿದೆಯೆನ್ನಲಾಗಿದೆ. ಪಾಮೆಣ್ಣೆ ಕೈಗಾರಿಕೆಯಲ್ಲಿ ಕೆಲಸಮಾಡುತ್ತಿರುವ 17000 ಕ್ಕೂ ಮಿಕ್ಕ ಕಾರ್ಮಿಕರ ಒಳಿತಿಗಾಗಿ ರಫ್ತು ನಿರ್ಬಂಧ ಹಿಂತೆಗೆಯಲಾಗುವುದೆಂದು ಅಲ್ಲಿನ ಸರಕಾರ ಪ್ರಕಟಿಸಿದೆ. ಇದರಿಂದ ಹೆಚ್ಚಾದ ಖಾದ್ಯತೈಲಗಳ ದರ ಇಳಿಕೆಯಾಗುವ ಸಾಧ್ಯತೆ ಇದೆ. ದರಗಳು ಈಗಾಗಲೇ ಇಳಿಕೆಯಾಗಲಾರಂಭವಾಗಿದೆ.

## ಜೋಳ ಉತ್ಪಾದನೆ ಇಳಿಕೆ ಆಫ್ರಿಕಾದಲ್ಲಿ

ಬರ ಪೀಡಿತವಾದ ದಕ್ಷಿಣ ಆಫ್ರಿಕಾದ ಸಹರಾ ಪ್ರದೇಶಗಳಲ್ಲಿ ಈ ಸೀಸನ್‌ನಲ್ಲಿ ಬಹಳ ಇಳಿಕೆಯಾಗಬಹುದೆನ್ನಲಾಗಿದ್ದು, ಇಡಿಯ ಪ್ರದೇಶಕ್ಕೆ ಪರಿಣಾಮ ಬೀರಬಹುದೆನ್ನಲಾಗಿದ್ದು, ಕೆನ್ಯಾ ಬಹಳ ಸಂಕಷ್ಟಕ್ಕೊಳಗಾಗಿದೆಯೆನ್ನಲಾಗಿದೆ.

## 2030 ರ ವೇಳೆಗೆ ಭಾರತದಲ್ಲಿ ಜೋಳ ಬಳಕೆ 33.8 ಶೇಕಡಾ ಹೆಚ್ಚಳ

FICCI - YES ಬ್ಯಾಂಕ್ ವರದಿಗಳು 2030 ರ ವೇಳೆಗೆ ಭಾರತದ ಜೋಳ ಬಳಕೆ 33.8 ಶೇಕಡಾ ಹೆಚ್ಚಳವಾಗಲಿದೆಯೆಂದಿದೆ. ಕೈಗಾರಿಕಾ ಬಳಕೆ ಗಣನೀಯ ಹೆಚ್ಚಳವಿರುವುದು ಹಾಗೂ ದೇಶೀ ಆಂತರಿಕ ಬೇಡಿಕೆ ಹೆಚ್ಚಳವಿರುವುದರಿಂದ ವಾರ್ಷಿಕ ಜೋಳ ಬಳಕೆ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ. ಮುಂದಿನ ವರ್ಷಗಳಲ್ಲಿ ಉತ್ಪಾದನೆ ಹೆಚ್ಚಳವಾದಂತೆ ಬಳಕೆಯೂ ಹೆಚ್ಚಳವಾಗುವ ಸಾಧ್ಯತೆಯಿದೆ.

## 2022-23 ರಲ್ಲಿ ಜಾಗತಿಕ ಸೋಯಾಬೀನ್ ಉತ್ಪಾದನೆ ಹೆಚ್ಚಳ

USDA ವರದಿಯಂತೆ ಪ್ರಮುಖ ಜಾಗತಿಕ ಉತ್ಪಾದಕ ದೇಶಗಳಾದ ಬ್ರೆಜಿಲ್, ಅರ್ಜೆಂಟಿನಾ, ಪರಗ್ವೆಗಳಲ್ಲಿ ಸೋಯಾಬೀನ್ ಉತ್ಪಾದನೆ 13 ಶೇಕಡಾ ಹಾಗೂ ಅಮೇರಿಕಾ(ಯು.ಎಸ್) ದಲ್ಲಿ 8 ಶೇಕಡಾ ಹೆಚ್ಚಳವಾಗಲಿದೆಯೆಂದು ಹೇಳಿದೆ. ಹಾಗೂ ಜಾಗತಿಕ ಬೇಡಿಕೆಯೂ ಹೆಚ್ಚಳವಾಗಲಿದೆಯೆಂದು ಹೇಳಿದೆ.